ಗ್ರಾಮಾಂತರ ಪ್ರದೇಶಗಳಲ್ಲಿ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸುವುದು

106 (259) : ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಪಶು ಆಸ್ಪತ್ರೆಗಳ ಕೊರತೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಸಕ್ತ ಸಾಲಿನಲ್ಲಿ ಹೊಸ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸಲು ಸರ್ಕಾರ ಸಂಕಲ್ಪಿಸಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಿರಾಜಿದ್ದೀನ್ ಎನ್. ಪಾಟೀಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)

ಅ) ಇಲ್ಲ.

ಆ) ಅಂತಹ ಕಾರ್ಯಕ್ರಮವಿರುವುದಿಲ್ಲ.

ಇ) ಮೇಲಿನ ಉತ್ತರದ ಹಿನ್ನಲೆಯಲ್ಲಿ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪಶುವೈದ್ಯರ ನೇಮಕಾತಿ

107 (261) : ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 3-4 ಪಶು ಆಸ್ಪತ್ರೆಗಳಿಗೆ ಒಬ್ಬರೇ ವೈದ್ಯರು ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಖಾಲಿ ಇರುವ ಪಶು ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರ ಏನು ಕ್ರಮಕೈಗೊಂಡಿದೆ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)

ಅ) ಬಂದಿದೆ.

ಆ) ಸದ್ಯದಲ್ಲಿಯೇ 250 ಪಶುವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ರೈತರಿಗೆ ಉತ್ತಮ ಮಟ್ಟದ ಬಿತ್ತನೆ ಬೀಜಗಳ ಸರಬರಾಜು

108 (287) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರಿಗೆ ಉತ್ತಮ ಮಟ್ಟದ ಬಿತ್ತನೆ ಬೀಜಗಳನ್ನು ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಸಕಾಲಕ್ಕೆ ರೈತರಿಗೆ ಉತ್ತಮ ಮಟ್ಟದ ಬಿತ್ತನೆ ಬೀಜಗಳು ದೊರಕದೇ ಅಗಾಗ್ಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಆ ಬಗ್ಗೆ ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ;

ಈ) ರೈತ ಬೆಳೆವ ಆಹಾರ ಪದಾರ್ಥಗಳ ಬೆಳೆಗಳಿಗೆ ಯಾವ ರೀತಿಯ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲಾಗಿದೆ. (ವಿವರ ಒದಗಿಸುವುದು)

ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2004ರ ಮುಂಗಾರು ಹಂಗಾಮಿಗೆ ಬೇಕಿರುವ ಪ್ರಮಾಣಿತ/ಗುಣಮಟ್ಟದ ಬಿತ್ತನೆ ಬೀಜಗಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮ, ರಾಷ್ಟ್ರೀಯ ಬೀಜ

ನಿಗಮ, ಕರ್ನಾಟಕ ಎಣ್ಣೆಕಾಳು ಮಹಾಮಂಡಳಿ ಮತ್ತು ಖಾಸಗಿ ಸಂಸ್ಥೆಗಳ ಮೂಲಕ ಕೃಷಿ ಇಲಾಖೆಯ ಮೇಲ್ವಿಚಾರಣೆಯಲ್ಲಿ ಸರಬರಾಜಿಗೆ ವ್ಯವಸ್ಥೆ ಮಾಡಲಾಗಿರುತ್ತದೆ.

ಆ) ಇಲ್ಲಾ.

ಇ) ಉದ್ಭವಿಸುವುದಿಲ್ಲ.

ಈ) ಕನಿಷ್ಠ ಬೆಂಬಲ ಬೆಲೆಗಿಂತ ಖರೀದಿ ದರವು ಕುಂಟಿತವಾಗುವ ಪಕ್ಷದಲ್ಲಿ, ನೇರವಾಗಿ ಖರೀದಿಸಲಾಗುವುದು. ಈ ವರ್ಷದಲ್ಲಿ ಹೆಚ್ಚಿನ ಪ್ರದೇಶದಲ್ಲಿ ಹತ್ತಿ, ಕಬ್ಬು ಮತ್ತು ಮುಸುಕಿನ ಜೋಳವನ್ನು ಬೆಳೆದಿರುವುದರಿಂದ ಉತ್ಪಾದನೆಯು ಹೆಚ್ಚಾದ ಪಕ್ಷದಲ್ಲಿ ಖರೀದಿಸುವ ಸಂಸ್ಥೆಗಳಿಗೆ ಈ ಬಗ್ಗೆ ಮುಸ್ಸಾಚನೆಯನ್ನು ನೀಡಲಾಗಿದೆ.

ರಾಜ್ಯದಲ್ಲಿರುವ ಪಶುಸಂಗೋಪನಾ ಆಸ್ಪತ್ರೆ ಮತ್ತು ಕೇಂದ್ರಗಳು

109 (289) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸ್ತುತವಿರುವ ಪಶು ವೈದ್ಯಕೀಯ ಆಸ್ಪತ್ರೆಗಳು ಹಾಗೂ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಇವುಗಳಿಗೆ ಸಮರ್ಪಕವಾಗಿ ಔಷಧಿ ಸರಬರಾಜಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪಶುಸಂಗೋಪನೆಯನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)

ಅ)

ಪಶು ಆಸ್ಪತ್ರೆ	294
ಪಶು ಚಿಕಿತ್ಸಾಲಯ	1451
ಪ್ರಾಥಮಿಕ ಪಶು ಚಿಕಿತ್ಸಾಲಯ	1456
ಸಂಚಾರಿ ಪಶು ಚಿಕಿತ್ಸಾಲಯ	173
ಕೃತಕ ಗರ್ಭಾದಾರಣಾ ಕೇಂದ್ರ	400
ಒಟ್ಟು	3774

ಆ) ಬಂದಿದೆ.

ಇ) 1) ಜಾನುವಾರುಗಳ ಔಷಧೋಪಚಾರ

2) ವಿವಿಧ ರೋಗಗಳ ವಿರುದ್ಧ ಲಸಿಕೆ ಕಾರ್ಯಕ್ರಮ

3) 600 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

4) ಜಾನುವಾರು ಆರೋಗ್ಯ ಮತ್ತು ಬರಡು ರಾಸುಗಳ ತಪಾಸಣೆ ಶಿಬಿರಗಳ ಏರ್ಪಾಡು

5) ಜಿಲ್ಲಾ ಮಟ್ಟದಲ್ಲಿ ಜಾನುವಾರು ರೋಗ ತಪಾಸಣಾ ಪ್ರಯೋಗಾಲಯಗಳ ಸ್ಥಾಪನೆ

6) ಮೇವು ಅಭಿವೃದ್ಧಿಗಾಗಿ ಮೇವು ಕಿರಿಪೊಟ್ಟಣಗಳ ವಿತರಣೆ

7) ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆಯ ಸ್ಥಾಪನೆ

8) ಪಶು ವಿಜ್ಞಾನದಲ್ಲಿ ಕಲಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಪ್ರಗತಿಗಾಗಿ ಕರ್ನಾಟಕ ಪಶುವೈದ್ಯಕೀಯ ಪಶು ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯ ಸ್ಥಾಪನೆ